ಸಂವರ್ತ 'ಸಾಹಿಲ್'



ಗಾಂಧಿ-150 ವಿಶೇಷ

# ನಿರಂತರ ಚಲನಶೀಲತೆ

ಗಾಂಧೀಜಿ ಅವರ ಪ್ರಸ್ತುತತೆ ಕುರಿತು ಹೊಸತಲೆಮಾರಿನ ಲೇಖಕರೊಬ್ಬರು ಪ್ರತಿಸ್ಪಂದಿಸಿದ್ದು ಇಲ್ಲಿದೆ...

ಸುಮಾರು 1928ರ ಮಾತು. ಅಹಮದಾಬಾದ್ ನಗರದ ಬೀದಿಯಲ್ಲಿ ರೇಬಿಸ್ ನಾಯಿಗಳ ಕಾಟ ವಿಪರೀತವಾಯಿತು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಅಹಿಂಸೆಯನ್ನು ಮೈಗೂಡಿಸಿಕೊಂಡಿದ್ದ ಅಲ್ಲಿನ ಜನರು ಏನು ಮಾಡುವುದುದೆಂದು ತಿಳಿಯದಾದರು. ಮನುಷ್ಯರ ಪ್ರಾಣಕ್ಕೆ ಅಪಾಯ ಉಂಟು ಮಾಡುವಷ್ಟು ನಾಯಿಗಳ ಕಾಟ ಹೆಚ್ಚಾದಾಗ, ಮುನ್ಸಿಪಾಲಿಟಿಯವರು ಅವುಗಳನ್ನು ಗುಂಡಿಕ್ಕಿ ಕೊಲ್ಲಲು ನಿರ್ಧರಿಸಿದರು. ಆ ಹೊತ್ತಿಗೆ ಸೇಠ್ ಅಂಬಾಲಾಲ್ ಸಾರಾಭಾಯ್ ಅವರ ನೇತೃತ್ವದಲ್ಲಿ ಊರ ಜನರು ಗಾಂಧೀಜಿ ಬಳಿಗೆ ಸಲಹೆ ಕೇಳಲು ಧಾವಿಸಿದರು. ಅವರನ್ನೆಲ್ಲಾ ಬೆಚ್ಚಿಸುವಂತೆ ಗಾಂಧೀಜಿ ನಾಯಿಗಳನ್ನು ಕೊಲ್ಲಲು ಅನುಮತಿ ನೀಡಿದರು.

ಅಲ್ಲಲ್ಲಿ ಗಾಂಧೀಜಿಯ ಅಹಿಂಸಾ ಮೌಲ್ಯದ ಕುರಿತು ಎತ್ತಲಾದ ಪ್ರಶ್ನೆಯನ್ನು ಗಾಂಧೀಜಿ ಎದುರಿಸಿದರು.

ಹೆಚ್ಚುಕಡಿಮೆ ಅದೇ ಸಂದರ್ಭದಲ್ಲಿ ಗಾಂಧೀಜಿಯ ಆಶ್ರಮದಲ್ಲಿ ಒಂದು ಹಸು ಅನಾರೋಗ್ಯಕ್ಕೆ ಒಳಗಾಗಿ, ಅದು ಸುಧಾರಿಸುವ ಯಾವ ಲಕ್ಷಣವೂ ಕಾಣಿಸಲಿಲ್ಲ. ಪ್ರಾಣಿವೈದ್ಯರು ಅದಿನ್ನು ಬದುಕದು ಎಂದರು. ನಡೆದಾಡಲು ಆಗದೆ ಬಿದ್ದಲ್ಲೇ ಇರಬೇಕಾಗಿದ್ದ ಆ ಹಸುವಿಗೆ ಉಣ್ಣುವುದು ಕುಡಿಯುವುದು ಸಹ ಕಷ್ಟವಾಯಿತು. ಸದಾ ಮುತ್ತಿಕೊಂಡಿರುತ್ತಿದ್ದ ನೊಣಗಳು ಆ ಹಸುವಿಗಾಗುತ್ತಿದ್ದ ಸಂಕಟವನ್ನು ಹೆಚ್ಚಿಸಿದ್ದವು. ಒದ್ದಾಡುತ್ತಿದ್ದ ಹಸುವನ್ನು ಆ ಸಂಕಟದಿಂದ ಪಾರು ಮಾಡುವುದು ಅದಕ್ಕೆ ಕರುಣೆ ತೋರಿದಂತೆ ಎಂದುಕೊಂಡು ಗಾಂಧೀಜಿ ಅದನ್ನು ಕೊಲ್ಲಲು ನಿರ್ಧರಿಸಿದರು.